Estd. : 1986
K.U. Code No. 1210

ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ (ರಿ), ಚಿತ್ರದುರ್ಗ

ಫೋನ : 0836-2950300

ಎಸ್.ಜೆ.ಎಂ.ವಿ. ಮಹಾಂತ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ



ರಾಯಾಪುರ, ಧಾರವಾಡ–580 009

Email : sjmvmahantha@gmail.com

Website : www.sjmvdharwad.com

CURRICULAR & CO-CURRICULAR EVENTS

OF THE YEAR

2025 – 26

EVENT TITLE

HINDI-DAY

- - - - - EVENT DESCRIPTION - - - - -

Celebration of Hindi Day at our College by Department of Hindi held on 19-09-2026.



DATE : 19-09-2026 | TIME : 11:30 am | VENUE : Sabha Bhavan

S.J.M.V MAHANTHA FIRST GRADE ARTS AND COMMERCE COLLEGE
RAYAPUR, DHARWAD-5800 09

Date : 13-09-2026

NOTICE

This is to inform the staff & Students that Hindi –Day is to be celebrated on 19-09-2026. All are here by informed to attend the programme .

HOD
Dept, of Hindi

Principal
ಎಸ್.ಜೆ.ಎಂ.ವಿ. ಮಹಾಂತ ಪ್ರಥಮ ದರ್ಜೆ
ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ,
ರಾಯಾಪುರ, ಧಾರವಾಡ-580 009

C.K Hubli
IQAC
Co-ordinator

CELEBRATION OF HINDI DAY 19-09-2026





IQAC
Co-ordinator

ಪ್ರಾಂಶುಪಾಲರು
ಎಸ್.ಜೆ.ಎಂ.ವಿ. ಮಹಾಂತ ಪ್ರಥಮ ದರ್ಜೆ
ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ,
ರಾಯಾಪುರ, ಧಾರವಾಡ-580 009

PublicNext

Download App

Public Feed

ಧಾರವಾಡ : ಪ್ರತಿಯೊಂದು ಭಾರತೀಯ ಭಾಷೆಯು ದೇಶದ ಹೆಮ್ಮೆ - ಪ್ರೊ. ಎಮ್. ಬಿ. ಅಳಗವಾಡಿ

Published 17 days ago





ಧಾರವಾಡ : ರಾಯಾಪುರದಲ್ಲಿರುವ ಎಸ್ ಜೆ ಎಂ ವಿ ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂದು ಹಿಂದಿ ದಿವಸವನ್ನು ಆಚರಿಸಲಾಯಿತು.

ಗ್ರಂಥಾಲಯದಲ್ಲಿ
ಎಸ್.ಜೆ.ಎಂ.ವಿ. ಮಹಾಂತ ಪ್ರಥಮ ದರ್ಜೆ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ರಾಯಾಪುರ, ಧಾರವಾಡ-580 009

ಹಿಂದಿ ದಿವಸದ ನಿಮಿತ್ತ ಮಾತನಾಡಿದ ಮಹಾವಿದ್ಯಾಲಯದ ಹಿಂದಿ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ.ಬಿ ಅಳಗವಾಡಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಭಾರತದ

ಪ್ರತಿ ವರ್ಷ ಸೆಪ್ಟೆಂಬರ್ 14ರಂದು ಹಿಂದಿ ದಿವಸ್ವನ್ನು ಆಚರಿಸಲಾಗುತ್ತದೆ. 1949ರ ಸೆಪ್ಟೆಂಬರ್ 14ರಂದು ಭಾರತದ ಸಂವಿಧಾನ ಸಭೆಯು ಹಿಂದಿಯನ್ನು ದೇವನಾಗರಿ ಲಿಪಿಯಲ್ಲಿ ಕೇಂದ್ರ ಸರ್ಕಾರದ ರಾಜಭಾಷೆಯಾಗಿ ಅಂಗೀಕರಿಸಿತು. ಈ ದಿನದ ಸ್ಮರಣಾರ್ಥ ಹಿಂದಿ ದಿವಸ್ ಆಚರಣೆ ಪ್ರಾರಂಭವಾಯಿತು.

ಭಾರತವು ಅನೇಕ ಭಾಷೆ, ಲಿಪಿ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಹೊಂದಿರುವ ದೇಶ. ಕನ್ನಡ, ಹಿಂದಿ, ತಮಿಳು, ತೆಲುಗು, ಮರಾಠಿ, ಬಂಗಾಳಿ, ಮಲಯಾಳಂ ಸೇರಿದಂತೆ ಅನೇಕ ಭಾಷೆಗಳು ನಮ್ಮ ದೇಶದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ ಒಂದು ಭಾಷೆಯನ್ನು ಗೌರವಿಸುವುದು ಎಂದರೆ ಮತ್ತೊಂದು ಭಾಷೆಯನ್ನು ಕಡಿಮೆ ಮಾಡುವುದು ಅಲ್ಲ. ಪ್ರತಿಯೊಂದು ಭಾರತೀಯ ಭಾಷೆಯೂ ನಮ್ಮ ದೇಶದ ಹೆಮ್ಮೆ.
ಹಿಂದಿ ಭಾಷೆಯ ಸಾಹಿತ್ಯ ಬಹಳ ಶ್ರೀಮಂತವಾಗಿದೆ. ಕಬೀರ, ತುಳಸೀದಾಸ, ಪ್ರೇಮಚಂದ್, ಮಹಾದೇವಿ ವರ್ಮಾ, ಹರಿವಂಶರಾಯ್ ಬಚ್ಚನ್ ಮುಂತಾದ ಅನೇಕ ಸಾಹಿತಿಗಳು ಹಿಂದಿ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಕವನ, ಕಥೆ, ಕಾದಂಬರಿ, ನಾಟಕ, ಪತ್ರಿಕೋದ್ಯಮ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿಯೂ ಹಿಂದಿಯ ಪಾತ್ರ ಮಹತ್ವದ್ದಾಗಿದೆ.
ಇಂದಿನ ಡಿಜಿಟಲ್ ಯುಗದಲ್ಲಿ ಭಾಷೆಯ ಬಳಕೆಯ ಸ್ವರೂಪವೂ ಬದಲಾಗುತ್ತಿದೆ. ಸಾಮಾಜಿಕ ಮಾಧ್ಯಮ, YouTube, OTT, ಡಿಜಿಟಲ್ ಪತ್ರಿಕೆಗಳು ಮತ್ತು ವಿವಿಧ ಆನ್‌ಲೈನ್ ವೇದಿಕೆಗಳ ಮೂಲಕ ಹಿಂದಿ ಭಾಷೆ ಕೋಟ್ಯಂತರ ಜನರನ್ನು ತಲುಪುತ್ತಿದೆ ಎಂದರು .

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯದಂತಹ ಡಾ. ಪುಷ್ಪಾ ಬಸನಗೌಡರ ಅವರು ಮಾತನಾಡುತ್ತಾ, ವಿದ್ಯಾರ್ಥಿಗಳು ಭಾಷೆಯನ್ನು ಕೇವಲ ಪರೀಕ್ಷೆಯ ವಿಷಯವಾಗಿ ನೋಡದೆ, ಜ್ಞಾನ ಸಂಪಾದನೆಯ ಸಂವಹನ ಭಾಷೆಯಾಗಿ ನೋಡಿ. ಭಾಷೆ ಎನ್ನುವುದು ಕೇವಲ ಸಂವಹನದ ಸಾಧನವಲ್ಲ; ಅದು ಒಂದು ಜನಾಂಗದ ಸಂಸ್ಕೃತಿ, ಸಾಹಿತ್ಯ, ಇತಿಹಾಸ ಮತ್ತು ಭಾವನೆಗಳನ್ನು ಪ್ರತಿಬಿಂಬಿಸುವ ಶಕ್ತಿಯುತ ಮಾಧ್ಯಮ.

ಭಾರತವು ಅನೇಕ ಭಾಷೆಗಳನ್ನು ಹೊಂದಿರುವ ದೇಶ. ನಮ್ಮ ಕನ್ನಡ ನಮ್ಮ ಹೆಮ್ಮೆ. ಅದರ ಜೊತೆಗೆ ಹಿಂದಿ ಸೇರಿದಂತೆ ಭಾರತದ ಎಲ್ಲ ಭಾಷೆಗಳಿಗೂ ಗೌರವ ನೀಡುವುದು ನಮ್ಮ ಜವಾಬ್ದಾರಿ. ಭಾಷಾ ವೈವಿಧ್ಯತೆಯೇ ಭಾರತದ ಸೌಂದರ್ಯ.
ಹಿಂದಿ ದೇಶದ ವಿವಿಧ ಭಾಗಗಳ ಜನರ ನಡುವೆ ಸಂವಹನಕ್ಕೆ ಸಹಕಾರ ನೀಡುವ ಪ್ರಮುಖ ಭಾರತೀಯ ಭಾಷೆಯಾಗಿದೆ. ಹಿಂದಿ ಸಾಹಿತ್ಯವೂ ಬಹಳ ಶ್ರೀಮಂತವಾಗಿದ್ದು, ಅನೇಕ ಮಹಾನ್ ಕವಿಗಳು, ಸಾಹಿತಿಗಳು ಮತ್ತು ಚಿಂತಕರು ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ.

ಪ್ರಸ್ತುತ ಜಾಗತೀಕರಣ ಮತ್ತು ಡಿಜಿಟಲ್ ಯುಗದಲ್ಲಿ ಭಾಷೆಗಳ ಮಹತ್ವ ಮತ್ತಷ್ಟು ಹೆಚ್ಚಾಗಿದೆ. ವಿದ್ಯಾರ್ಥಿಗಳು ಒಂದು ಭಾಷೆಗೆ ಸೀಮಿತರಾಗದೆ ಹಲವು ಭಾಷೆಗಳನ್ನು ಕಲಿಯಬೇಕು. ಹೆಚ್ಚು ಭಾಷೆಗಳನ್ನು ಕಲಿತಷ್ಟು ನಮ್ಮ ಜ್ಞಾನಲೋಕವೂ ವಿಸ್ತಾರವಾಗುತ್ತದೆ.

ವಿದ್ಯಾರ್ಥಿಗಳೇ, ಭಾಷೆಯ ಬಗ್ಗೆ ಅಭಿಮಾನ ಇರಲಿ; ಆದರೆ ಭಾಷೆಯ ಹೆಸರಿನಲ್ಲಿ ಭೇದಭಾವ ಇರಬಾರದು. ನಮ್ಮ ಮಾತೃಭಾಷೆಯನ್ನು ಪ್ರೀತಿಸುತ್ತಾ, ಇತರ ಭಾಷೆಗಳನ್ನು ಗೌರವಿಸುವ ಮನೋಭಾವವನ್ನು ಬೆಳೆಸಿಕೊಳ್ಳೋಣ ಎಂದರು.

ಕಾರ್ಯಕ್ರಮದಲ್ಲಿ ಹಿಂದಿ ವಿಭಾಗದ ವಿದ್ಯಾರ್ಥಿನಿಯರಾದ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಐ.ಕ್ಯೂ.ಎ.ಸಿ ಸಂಯೋಜಕರಾದ ಪ್ರೊ. ಸಿ.ಕೆ ಹುಬ್ಬಳ್ಳಿ, ವಿದ್ಯಾರ್ಥಿ ಪ್ರಧಾನ ಕಾರ್ಯದರ್ಶಿಯಾದ ರವಿ ದಾಸ ಕಾಂಬ್ಳೆ ಹಾಗೂ ಮಹಾವಿದ್ಯಾಲಯದ ಸಮಸ್ತ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಹಿಂದಿ ವಿಭಾಗದ ವಿದ್ಯಾರ್ಥಿನಿಯರಾದ ಕವಿತಾ ಕಿತ್ತೂರ,ಲಕ್ಷ್ಮಿ ಹಾಗೂ ಅರ್ಚನಾ ದೊಡಮನಿ ಕಾರ್ಯಕ್ರಮ ನಿರೂಪಿಸಿದರು.

ಪ್ರಾಚಾರ್ಯರು
ಎಸ್.ಜಿ.ಎಂ.ವಿ. ಮಹಾಂತ ಪ್ರಭು ದರ್ಗೆ
ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ.
ರಾಯಾಪುರ, ಧಾರವಾಡ-580 009